ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಸಂಖ್ಯೆ:ಜಿಪಂಚಿ/ಆಡಳಿತ/1/ಸುಲು/ಆ.ಅ/2024-25 ದಿನಾಂಕ:01-07-2024

ರವರಿಗೆ,

ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ
ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ
ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ

ಮಾನ್ಯರೇ,

ವಿಷಯ : 2024-25 ನೇ ಸಾಲಿಗೆ ಗ್ರಾಮೀಣ ಕೈಗಾರಿಕೆಗಳು ,ಜಿಲ್ಲಾ ಪಂಚಾಯತ್ ,ಚಿಕ್ಕಬಳ್ಳಾಪುರ ಇಲಾಖೆಯ ಯೋಜನೆಯ ಅರ್ಜಿಗಳನ್ನು online ಮೂಲಕ ಆಹ್ವಾನಿಸಲು ನಮೂನೆಗಳನ್ನು nic ಮುಖಾಂತರ ಸಿದ್ಧಪಡಿಸಿಕೊಡುವ ಬಗ್ಗೆ

ಉಲ್ಲೇಖ : 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂಖ್ಯೆ :ಗ್ರಾಅಪಂರಾ 330 ಜಿಪಸ 2022 ದಿನಾಂಕ : 02-07-2022

2. ಉಪ ನಿರ್ದೇಶಕರು (ಗ್ರಾ ಕೈ) ವಿಭಾಗ ಜಿ ಪಂ ಚಿಕ್ಕಬಳ್ಳಾಪುರ ರವರ ಕಡತ ಟಿಪ್ಪಣಿ ಮನವಿ ದಿನಾಂಕ:-28-06- 2024

ಮೇಲ್ಕಂಡ ವಿಷಯಕ್ಕೆ ಸಂಬದಿಸಿದಂತೆ ಗ್ರಾಮೀಣ ಕೈಗಾರಿಕೆಗಳು ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ಇಲಾಖೆಯ ವತಿಯಿಂದ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳು ಮತ್ತು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳನ್ನು ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖ(1) ರ ಸುತ್ತೋಲೆಯಲ್ಲಿ ಜಿಲ್ಲಾ ಪಂಚಾಯಿತಿಯಿಂದ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು online ಅರ್ಜಿಗಳನ್ನು ಆಹ್ವಾನಿಸುವಂತೆ ಮಾರ್ಗಸೂಚಿಯನ್ನು ನೀಡಿರುತ್ತಾರೆ ಅದರಂತೆ ಗ್ರಾಮೀಣ ಕೈಗಾರಿಕೆ ಇಲಾಖೆಯ ಮೇಲ್ಕಂಡ ಎರಡು ಯೋಜನೆಗಳಡಿಯಲ್ಲಿ ಫಲಾನುಭವಿಗಳಿಂದ ಸೇವಾಸಿಂಧು ಲಾಗಿನ್ ಮುಖಾಂತರ online ಅರ್ಜಿಗಳನ್ನು ಆಹ್ವಾನಿಸಲು ಎಲ್ಲಾ ರೀತಿಯ ತಾಂತ್ರಿಕ ಸಹಕಾರ ನೀಡುವಂತೆ online ಪೋರ್ಟಲ್ ತಯಾರಿಸಿಕೊಡಲು ಈ ಮೂಲಕ ತಮಗೆ ಸೂಚಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ಚಿಕ್ಕಬಳ್ಳಾಪುರ.

ರವರಿಗೆ

1.ಉಪನಿರ್ದೇಶಕರು ,ಗ್ರಾಮೀಣ ಕೈಗಾರಿಕಾ ವಿಭಾಗ ,ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ರವರಿಗೆ ಮುಂದಿನ ಕ್ರಮಕ್ಕಾಗಿ